# MyCARE

ಪಯಣದ ಪ್ರತೀ ಹೆಜ್ಜೆಯಲ್ಲೂ ನಿಮಗೆ ಸಹಾಯ ಮಾಡುತ್ತದೆ



## “ಟೈಪ್ 2 ಡಯಾಬಿಟಿಸ್

ಇರುವವರಲ್ಲಿ, ಇನ್ಸುಲಿನ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ”


USV

ನೀವು ಆಹಾರ ಸೇವಿಸಿದಾಗ, ಅದರಲ್ಲಿರುವ ಕಾರ್ಬೋಹೈಡ್ರೇಟ್, ಗ್ಲೂಕೋಸ್ ಆಗಿ ಪರಿವರ್ತನೆಗೊಳ್ಳುತ್ತದೆ; ತದನಂತರ, ಅದು **ರಕ್ತ-ಪರಿಚಲನೆಗೆ ಬಿಡುಗಡೆಗೊಳ್ಳುತ್ತದೆ.**




ನಿಮ್ಮ ಬ್ಲಡ್ ಶುಗರ್ ಮಟ್ಟ ಹೆಚ್ಚಿದಾಗ,


**ಮೇದೋಜ್ಜೀರಕ ಗ್ರಂಥಿಯು ಇನ್ಸುಲಿನ್ ಎಂಬ ಹಾರ್ಮೋನನ್ನು ಬಿಡುಗಡೆಗೊಳಿಸುತ್ತದೆ.**




ಸಕ್ಕರೆಯನ್ನು (ಗ್ಲೂಕೋಸ್) **ರಕ್ತದಿಂದ ಶರೀರದ ಜೀವಕೋಶಗಳಿಗೆ** ಸಾಗಿಸಲು ಇನ್ಸುಲಿನ್ ಸಹಾಯ ಮಾಡುತ್ತದೆ; ಜೀವಕೋಶಗಳಲ್ಲಿ, ಶಕ್ತಿಗಾಗಿ ಗ್ಲೂಕೋಸ್‌ನ ಉಪಯೋಗವಾಗುತ್ತದೆ.




**ಟೈಪ್ 2 ಡಯಾಬಿಟಿಸ್‌ನಲ್ಲಿ,**
ಶರೀರವು ತಾನು ಉತ್ಪಾದಿಸುವ ಇನ್ಸುಲಿನನ್ನು ಒಂದೋ ಸಮರ್ಪಕವಾಗಿ ಬಳಸಿಕೊಳ್ಳುವುದಿಲ್ಲ ಅಥವಾ ಸಾಕಷ್ಟು ಪ್ರಮಾಣದಲ್ಲಿ ಆದನ್ನು ಉತ್ಪಾದಿಸುವುದಿಲ್ಲ; **ಹೀಗಾಗಿ ರಕ್ತದಲ್ಲಿ ತುಂಬ ಹೆಚ್ಚು ಶುಗರ್ ಉಳಿದುಕೊಳ್ಳುತ್ತದೆ.**




ಇದರಿಂದಾಗಿ ಕಾಲಕ್ರಮೇಣ **ಮೂತ್ರಪಿಂಡದ ಕಾಯಿಲೆ, ದೃಷ್ಟಿಹೀನತೆ ಮತ್ತು ಹೃದಯರೋಗದಂತಹ** ಆರೋಗ್ಯ ಸಂಬಂಧಿತ ಗಂಭೀರ ಸಮಸ್ಯೆಗಳು ಉಂಟಾಗಬಹುದು.




ಆದಕ್ಕಾಗಿಯೆ, ಟೈಪ್ 2 ಡಯಾಬಿಟಿಸ್ ಇರುವವರಲ್ಲಿ, ಬಾಯಿಯ ಮೂಲಕ ತೆಗೆದುಕೊಳ್ಳುವ ಡಯಾಬಿಟಿಸ್ ಔಷಧಿಗಳಿಂದ, ಡಯಾಬಿಟಿಸ್ ನಿಯಂತ್ರಣಕ್ಕೆ ಬರದಿದ್ದಲ್ಲಿ, ಅವರ ಬ್ಲಡ್ ಶುಗರ್ ಮಟ್ಟವನ್ನು ಸಾಮಾನ್ಯ ಶ್ರೇಣಿಯಲ್ಲಿ ಇಟ್ಟುಕೊಳ್ಳುವುದಕ್ಕಾಗಿ **ಪ್ರತಿದಿನ ಬಾಹ್ಯ ಇನ್ಸುಲಿನ್ ತೆಗೆದುಕೊಳ್ಳಬೇಕಾಗುತ್ತದೆ.**




**ಬಾಹ್ಯ ಇನ್ಸುಲಿನ್** ಉಪಚಾರವು, ಶರೀರವು ಸಾಮಾನ್ಯವಾಗಿ ಉತ್ಪಾದಿಸುವ **ಇನ್ಸುಲಿನ್‌ಗೆ ಒಂದು ಪರ್ಯಾಯವಷ್ಟೇ ಆಗಿದ್ದು**, ಇದು ಶರೀರಕ್ಕೆ ನೈಸರ್ಗಿಕವಾಗಿದೆ.



ಡಯಬಿಟಿಸ್ ಇದೆ ಎಂದು ಪತ್ತೆಯಾದ ನಂತರ, ಬೇಗನೆ ಇನ್ಸುಲಿನ್ ನೀಡುವುದನ್ನು ಆರಂಭಿಸುವುದರಿಂದ, **ಇನ್ಸುಲಿನ್ ಉತ್ಪಾದಿಸುವ ಜೀವಕೋಶಗಳಿಗೆ ವಿಶ್ರಾಂತಿ ನೀಡಲು ಮತ್ತು ಅವುಗಳನ್ನು ಸಂರಕ್ಷಿಸಲು ಸಹಾಯ ದೊರೆಯುತ್ತದೆ.**



**ಅನೇಕ ಬಗೆಯ ಇನ್ಸುಲಿನ್‌ಗಳು ಇಂದು ಲಭ್ಯವಿವೆ.** ನಿಮಗೆ ಯಾವ ಬಗೆಯ ಇನ್ಸುಲಿನ್ ಅಗತ್ಯವಿದೆ ಮತ್ತು ಅದನ್ನು ಎಷ್ಟು ಬಾರಿ ತೆಗೆದುಕೊಳ್ಳಬೇಕು ಎಂಬುದನ್ನು, ನಿಮ್ಮ ಜೀವನಶೈಲಿ, ಬ್ಲಡ್ ಶುಗರ್ ಮಟ್ಟಗಳು ಮತ್ತು ಇತರ ಔಷಧೋಪಚಾರಗಳನ್ನು ಪರಿಗಣಿಸಿಕೊಂಡು, ನಿಮ್ಮ ಡಾಕ್ಟರ್ ನಿರ್ಧರಿಸುತ್ತಾರೆ.



ಶೀಘ್ರ ಪರಿಣಾಮಕಾರಿ

ಮಧ್ಯಮ ಪರಿಣಾಮಕಾರಿ

ನಿಧಾನ ಪರಿಣಾಮಕಾರಿ

ಮೇಲಿನ ಚಿತ್ರವನ್ನು ಕೇವಲ ನಿರೂಪಣೆಗಾಗಿ ತೋರಿಸಲಾಗಿದೆ.



"ನೆನಪಿಡಿ, **ಇನ್ಸುಲಿನ್ ಒಂದು ಸುರಕ್ಷಿತ ಹಾಗೂ ನಂಬಿಗಸ್ಥ ಮಿತ್ರನಾಗಿದೆ;** ಇದು ನಿಮಗೆ ಆನಂದದಾಯಕ, ದೀರ್ಘ ಹಾಗೂ ಆರೋಗ್ಯಪೂರ್ಣ ಜೀವನ ನಡೆಸಲು ಸಹಾಯ ಮಾಡುತ್ತದೆ."

# MyCARE

ಪಯಣದ ಪ್ರತೀ ಹೆಜ್ಜೆಯಲ್ಲೂ ನಿಮಗೆ ಸಹಾಯ ಮಾಡುತ್ತದೆ

## ಸಂದರ್ಭ


1. ಡಯಾಬಿಟಿಸ್ ಎಂದರೇನು. CDC (2021). ಜುಲೈ 6, 2022ರಂದು ಇಲ್ಲಿಂದ ಪಡೆಯಲಾಗಿದೆ: https://www.cdc.gov/diabetes/basics/diabetes.html#:~:text=Diabetes%20is%20a%20chronic%20(long,your%20pancreas%20to%20release%20insulin.

2. ಇನ್ಸುಲಿನ್ ಎಂದು ನಾವು ಕರೆಯುವ ಅದ್ಭುತ ಪದಾರ್ಥದ ಇತಿಹಾಸ | ADA. Diabetes.org. (2019). ಜುಲೈ 6, 2022ರಂದು ಇಲ್ಲಿಂದ ಪಡೆಯಲಾಗಿದೆ: https://www.diabetes.org/blog/history-wonderful-thing-we-call-insulin#:~:text=In%201921%2C%20a%20young%20surgeon,millions%20of%20people%20with%20diabetes.



**Disclaimer:**
"The guide/presentation/content/literature is for general information, guidance and educational purposes only and is not complete or exhaustive. The guide/presentation/content/literature is not intended or implied to replace or substitute any current practice and or advice/guidance/diet provided by healthcare professionals. This guide/presentation/content/literature does not constitute any treatment/therapy/medication/diet/opinions for any patients who are on diabetes medication, the patients are required to prior consult their healthcare professional before acting on any change on treatment/therapy/ medication/diet and or opions. USV Private Limited makes no representations as to accuracy, completeness, correctness, suitability or validity of any information contained in this guide/presentation/content/literature and will not be liable for any losses, injuries or damages arising from its use."



ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಿದವರು USV